**SECC – 2011 – URGENT**

ಕರ್ನಾಟಕ ಸರ್ಕಾರ

ಸಂಖ್ಯೆ ಗ್ರಾಅಪ:37:ಎಸ್‌ಜೆವೈ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:25–07–2013

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ತುರ್ತು**

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ SECC 2011 ಅಧಿಕಾರಿಗಳು.
2. ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ) ಹಾಗೂ ಪ್ರಧಾನ SECC 2011 ಅಧಿಕಾರಿಗಳು ಬೆಂಗಳೂರು
3. ಆಯುಕ್ತರು ಮಹಾನಗರ ಪಾಲಿಕೆ ಹಾಗೂ ಪ್ರಧಾನ SECC 2011 ಅಧಿಕಾರಿಗಳು ಬೆಳಗಾಂ, ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಗುಲ್ಬರ್ಗ, ಬಳ್ಳಾರಿ ಮತ್ತು ದಾವಣಗೆರೆ.

ಮಾನ್ಯರೇ,

ವಿಷಯ: ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ–SECC 2011 **Deletion of Data** ಬಗ್ಗೆ.

*****

ರಾಜ್ಯದಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ (SECC-2011) ರ ಗಣತಿಯಲ್ಲಿ ನಿಮ್ಮ ಜಿಲ್ಲೆಯಿಂದ ಡಾಟಾ ಡಿಲೀಷನ್ ಬಗ್ಗೆ ಬಂದ ಪ್ರಸ್ತಾವನೆ / ದತ್ತಾಂಶವನ್ನು ಬಿ.ಇ.ಎಲ್ ಸಂಸ್ಥೆಗೆ ಕಳುಹಿಸಿ ಅವರಿಂದ ದೃಢೀಕರಣ ಪಡೆದು ನಂತರ ಎನ್.ಐ.ಸಿ ನವದೆಹಲಿಗೆ ಡಾಟಾ ಡಿಲೀಷನ್ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿತ್ತು.

ದಿನಾಂಕ.23–07–2013 ರಂದು ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಪ್ರಕ್ರಿಯೆಯ ಬಗ್ಗೆ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

ಡಿಲೀಷನ್ ಮಾಡುವ ದತ್ತಾಂಶವನ್ನು ಬಿ.ಇ.ಎಲ್ ಸಂಸ್ಥೆಯೇ ನಿಗದಿತ ನಮೂನೆಯಲ್ಲಿ ದತ್ತಾಂಶವನ್ನು ತಯಾರಿಸಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ SECC 2011 ಅಧಿಕಾರಿಗಳಿಗೆ ನೇರವಾಗಿ ದತ್ತಾಂಶವನ್ನು ಕಳುಹಿಸಿ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಬಿ.ಇ.ಎಲ್ ಸಂಸ್ಥೆಯಿಂದ ಸ್ವೀಕರಿಸಿದ ನಿಗಧಿತ ನಮೂನೆಯ ದತ್ತಾಂಶವನ್ನೇ ಪರಿಶೀಲಿಸಿ ಜಿಲ್ಲಾಧಿಕಾರಿಗಳು ದೃಢೀಕರಿಸಿ ಅದೇ ನಿಗಧಿತ ನಮೂನೆಯಲ್ಲೇ ಇ–ಮೇಲ್ ಮುಖಾಂತರ ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ತಿಳಿಸಲಾಗಿದೆ. ತಮ್ಮಿಂದ ವರದಿ ಬಂದ ನಂತರ ಡಾಟಾ ಡಿಲೀಷನ್ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದಾಗಿ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
Hemalatha
(ಪಿ. ಹೇಮಲತ)
ನಿರ್ದೇಶಕರು (ಸ್ವಉಕಾ) ಹಾಗೂ
ರಾಜ್ಯದ SECC–2011 ನೋಡಲ್ ಅಧಿಕಾರಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು: ಶ್ರೀ ಎಸ್.ಆರ್. ಮನೋಜ್, ಮ್ಯಾನೇಜರ್, (Smartcards) Smartcards Division ಬಿ.ಇ.ಎಲ್. ಸಂಸ್ಥೆ, ಜಾಲಹಳ್ಳಿ ಅಂಚೆ, ಬೆಂಗಳೂರು 560 013 ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.